11.	ಗುಬ್ಬಿ	ಡಿ. ರಾಂಪುರ ಬೇಳೂರು ಕೆ.ಜಿ.ಟಿಂಪಲ್ ಮಂಚಲದೊರೆ	ಸಿ.ಎನ್.ಪುರ
12.	ಕುಣಿಗಲ್	ಕೊಡವತ್ತಿ	ಉಜ್ಜಾನಿ ಕಾವರೆಕೆರೆ
13.	ಹುಲಿಯೂರು ದುರ್ಗ	-	-

ವಿಷಯ : ರಾಜ್ಯದಲ್ಲಿ ಕಂಪ್ಯೂಟರ್ ವಿಜ್ಞಾನ ಭೋದಿಸುವ ಸಂಸ್ಥೆಗಳ ಸಂಖ್ಯೆ.

1064

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕಂಪ್ಯೂಟರ್ ವಿಜ್ಞಾನ ಭೋಧಿಸುವ ಸಂಸ್ಥೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರಗಳನ್ನು ನೀಡುವುದು)?

ಆ) ಈ ಸಂಸ್ಥೆಗಳನ್ನು ಪ್ರಾಂಭಿಸುವ ಮೊದಲು ಸರ್ಕಾರದ ಅನುಮತಿ ಪಡೆಯುವ ಬಗ್ಗೆ ಯಾವುದಾದರೂ ನಿಯಮವಿದೆಯೇ?

ಇ) ಈ ಸಂಸ್ಥೆಗಳು ಅಳತೆಮೀರಿ ವಿದ್ಯಾಶುಲ್ಕವನ್ನು ಪಡೆಯುತ್ತಿದ್ದು ಮೂಲಭೂತ ಸೌಲಭ್ಯಗಳನ್ನು ಒದಗಿಸಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಸಂಸ್ಥೆಗಳಿಗೆ ಅನುಮತಿ ನೀಡಿ ಅವುಗಳ ಕಾರ್ಯವೈಖರಿಯ ಬಗ್ಗೆ ಗಮನವಿಡಲು ಒಂದು ಕಂಪ್ಯೂಟರ್ ಅಕಾಡೆಮಿಯನ್ನು ಸ್ಥಾಪಿಸುವ ಬಗ್ಗೆ ಪ್ರಸ್ತಾಪವಿದೆಯೇ?

ಶ್ರೀ ಎಸ್.ಎಂ.ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) ಅಂತಹ ಯಾವುದೇ ಸಂಸ್ಥೆಗಳು ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ನಡೆಯುತ್ತಿಲ್ಲ.

ಆ) ಇಲ್ಲ.

ಇ) ಇಲ್ಲ.

ಈ) ಇಲ್ಲ.

ವಿಷಯ : ತಾಂತ್ರಿಕ ಕೋರ್ಸ್‌ಗಳ ಬಗ್ಗೆ ಶ್ರೀ ರಾಮೇಗೌಡ ಸಮಿತಿ.

1066

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ವಯಸ್ಕರ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

ಅ) ಶ್ರೀ ರಾಮೆಗೌಡ ಸಮಿತಿಯು ತಾಂತ್ರಿಕ ಕೋರ್ಸ್‌ಗಳನ್ನು ಅಳವಡಿಸವ ಬಗ್ಗೆ ವರದಿಯನ್ನು ಸಲ್ಲಿಸಿದೆಯೇ?